**ಓ.ಎಸ್. ನಂ. 60/2018** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 12.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎ.ಸಿ.ಆರ್ ವಕೀಲರಿಂದಃ</u>**

ನನ್ನ ತಂದೆಗೆ ನಾವು 7 ಜನ ಮಕ್ಕಳಿದ್ದು ಅವರ ಪೈಕಿ 3 ಜನ ಹೆಣ್ಣು ಮಕ್ಕಳಿರುತ್ತಾರೆ. ನಾನು ಮತ್ತು ನನ್ನದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಬೇರೆ ಬೇರೆ ವಾಸವಾಗಿದ್ದು, ವ್ಯವಹಾರವನ್ನು ಒಟ್ಟಿಗೆ ಮಾಡುತ್ತಿದ್ದೇವೆ. ನಾನು ಮತ್ತು ನನ್ನ ಸಹೋದರರು ಆಸ್ತಿಯನ್ನು ವಿಭಾಗ ಮಾಡಿಕೊಂಡು ಬೇರೆ ಬೇರೆಯಾಗಿ ವ್ಯವಹಾರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಆಸ್ತಿಗೂ ನಮ್ಮ ಗ್ರಾಮಕ್ಕೂ ಅರ್ಧ ಕಿ.ಮೀ ದೂರವಿರುತ್ತದೆ. 1 ನೇ ಪ್ರತಿವಾದಿಯಿಂದ ದಾವಆಸ್ತಿಗೆ ಅರ್ಧ ಕಿ.ಮೀ ದೂರವಾಗುತ್ತದೆ. 1 ನೇ ಪ್ರತಿವಾದಿಯು ನನಗೆ 20 ವರ್ಷಗಳಿಂದ ಪರಿಚಯವಿರುತ್ತಾರೆ. ಅಗಸನಹುಂಡಿಯ ಗ್ರಾಮಸ್ಥರು ನನಗೆ ಚಿರಪರಿಚಿತರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ವೆಂಕಟೇಗೌಡರು ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ನನ್ನ ತಂದೆಯು 1 ನೇ ಪ್ರತಿವಾದಿಯ ತಂದೆಗೆ ದಾವಆಸ್ತಿಯನ್ನು ಕ್ರಯಕ್ಕೆ ನೀಡಿರುವ ದಿನದಿಂದಲೂ ದಾವಆಸ್ತಿಯ ಖಾತೆಯು ನಮ್ಮ ಹೆಸರಿನಲ್ಲಿರುವುದಿಲ್ಲ ಎಂದರೆ ಸಾಕ್ಷಿದಾರರು ಕ್ರಯಕ್ಕೆ ನೀಡಿರುವುದಿಲ್ಲ ಎನ್ನುವರು. 1967 ರಿಂದ ಈವರೆವಿಗಿನ ನಮ್ಮ ಹೆಸರಿನಲ್ಲಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಜೀವಂತವಿದ್ದಾಗ ದಾವಆಸ್ತಿಗೆ ಸಂಬಂಧಿಸಿದಂತೆ ಮಾಡಿರುವ ವ್ಯವಹಾರದ ಬಗ್ಗೆ ತಿಳಿದಿರುತ್ತದಾ ಎಂದರೆ ಸಾಕ್ಷಿದಾರರು ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎನ್ನುವರು. ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ಸಾಗುವಳಿ ಚೀಟಿಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ಪ್ರತಿವಾದಿಯರು ನ್ಯಾಯಾಲಯಕ್ಕೆ ಏನು ತಕರಾರು ಸಲ್ಲಿಸಿರುತ್ತಾರೆ ಮತ್ತು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಆಸ್ತಿಯ ಪಶ್ಚಿಮಕ್ಕೆ ಹೆಚ್.ಡಿಕೋಟೆ-ಮೂರ್ಕಾಲ್ಲು ರಸ್ತೆ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ಚಿಕ್ಕನಾಯಕ ರವರ ಜಮೀನು ಇರುತ್ತದೆ ಎಂದರೆ ಸಾಕ್ಷಿದಾರರು ಚಿಕ್ಕನಾಯಕ ರವರು ಮಹದೇವಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎನ್ನುವರು. ದಾವಆಸ್ತಿಯಲ್ಲಿ ಈಗ 4 ನೇ ಪ್ರತಿವಾದಿಯು ಶುಂಠಿ ಮತ್ತು ಹತ್ತಿ ಬೆಳೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು 2018 ರಲ್ಲಿ ನಮ್ಮನ್ನು ದಾವಆಸ್ತಿಯಿಂದ ಹೊರಗೆ ಹಾಕಿದ ನಂತರ ಬೆಳೆಯನ್ನು ಬೆಳೆಯುತ್ತಿದ್ದಾರೆ ಎನ್ನುವರು. 2018 ರಲ್ಲಿ ಗಲಾಟೆ ಮಾಡಿ ದಾವಆಸ್ತಿಯಿಂದ ಹೊರಗೆ ಹಾಕಿದಾಗ ಠಾಣೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ಮುಂದುವರಿದು ಪೋಲಿಸರು ದೂರನ್ನು ಪಡೆದುಕೊಂಡಿರುವುದಿಲ್ಲ ಎನ್ನುವರು. ಪೋಲಿಸರು ದೂರನ್ನು ಪಡೆದುಕೊಳ್ಳದಿರುವ ಬಗ್ಗೆ ಮೇಲಾಧಿಕಾರಿಗೆ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಹೆದರಿಸಿ ದೂರು ನೀಡದಂತೆ ಮಾಡಿರುತ್ತಾರೆ ಎನ್ನುವರು. ನಾನು ದಾವಆಸ್ತಿಗೆ ಸಂಬಂಧಿಸಿದ ದಾಖಲೆಯನ್ನು ಮೊದಲಿನಿಂದಲೂ

ನೋಡುತ್ತಿದ್ದೇನೆ. ದಾವಆಸ್ತಿಯನ್ನು ನನ್ನ ತಂದೆಯು 1 ನೇ ಪ್ರತಿವಾದಿ ತಂದೆಗೆ ಮಾರಾಟ ಮಾಡಿದ ದಿನದಿಂದ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ದಾವಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರವಾದ ನಂತರ ಅವರೇ ದಾವಆಸ್ತಿಯ ಸ್ವಾಧೀನದಲ್ಲಿದ್ದು ಅವರೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ಖರೀದಿ ಮಾಡಿರುತ್ತಾರೆ ಎನ್ನುವರು. ಈ ದಾವೆ ಸಲ್ಲಿಸಿರುವ ವಿಚಾರ 4 ನೇ ಪ್ರತಿವಾದಿಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿದಾರರು 4 ನೇ ಪ್ರತಿವಾದಿಯ ಮನೆ ನಮ್ಮ ಮನೆ ಪಕ್ಕದಲ್ಲಿದ್ದು ಎಲ್ಲ ವಿಚಾರ ಗೊತ್ತಿತ್ತು ಎನ್ನುವರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.